**ಕರ್ನಾಟಕ ಸರಕಾರ**
**(ಲೋಕೋಪಯೋಗಿ ಇಲಾಖೆ)**

ಕ್ರಸಂ/ಲೋಇ/ಬೆವಿ/ಅಂಪ/ಸಇಂ-6/2020-21/1587

ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ
ಲೋಕೋಪಯೋಗಿ ಇಲಾಖೆ
ಬೆಳಗಾವಿ ವಿಭಾಗ ಬೆಳಗಾವಿ
ದಿನಾಂಕಃ- 28 JUL 2020

ಇವರಿಗೆ,

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು
ಬೆಳಗಾವಿ ವಿಭಾಗ ಬೆಳಗಾವಿ

ಮಾನ್ಯರೇ,

ವಿಷಯ ಃ- ಬೆಳಗಾವಿ ಜಿಲ್ಲೆ ಖಾನಾಪೂರ ತಾಲೂಕಿನ ನೆರಸಾದಿಂದ ಕೊಂಗಳಾ ಮೂಲಕ ಗವಾಳಿ ಗ್ರಾಮಕ್ಕೆ ಸಂಪರ್ಕಿಸುವ ಕಾಲುದಾರಿಗೆ ಭಂಡುರಾ ನಾಲಾಗೆ ಹಾಗೂ ಸ್ಥಾನಿಕ ನಾಲಾಗೆ ಅಡ್ಡಲಾಗಿ ಕಾಲುಸಂಕ ನಿರ್ಮಾಣ ಕಾಮಗಾರಿಗೆ 0.11 ಹೆಕ್ಟೆರ್ ಅರಣ್ಯ ಭೂಮಿಯನ್ನು ಮಂಜೂರು ಮಾಡುವ ಕುರಿತು.

ಉಲ್ಲೇಖ ಃ- 1. ಫಾರೆಸ್ಟ್ ಕ್ಲಿಯರೆನ್ಸ್ ಸಂ:FP/KA/Approach/40060/2019
2.. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರು ಲೋಕೋಪಯೋಗಿ ಇಲಾಖೆ, ಉಪವಿಭಾಗ ಖಾನಾಪೂರ ಇವರ ಕಚೇರಿ ಪತ್ರ ಸಂ: 319 ದಿ:27.07.2020.

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಬೆಳಗಾವಿ ಜಿಲ್ಲೆ ಖಾನಾಪೂರ ತಾಲೂಕಿನ ನೆರಸಾದಿಂದ ಕೊಂಗಳಾ ಮೂಲಕ ಗವಾಳಿ ಗ್ರಾಮಕ್ಕೆ ಸಂಪರ್ಕಿಸುವ ಕಾಲುದಾರಿಗೆ ಭಂಡುರಾ ನಾಲಾಗೆ ಹಾಗೂಸ್ಥಾನಿಕ ನಾಲಾಗೆ ಅಡ್ಡಲಾಗಿ ಕಾಲುಸಂಕ ನಿರ್ಮಾಣ ಕಾಮಗಾರಿಗೆ 0.11 ಹೆಕ್ಟೆರ್ ಅರಣ್ಯ ಭೂಮಿಯನ್ನು ಮಂಜೂರು ನೀಡಲು ಆನಲೈನ್ ಮುಖಾಂತರ ಪ್ರಸ್ತಾವಣೆಯನ್ನು ಸಲ್ಲಿಸಲಾಗಿತ್ತು. ಸದರಿ ಪ್ರಸ್ತಾವಣೆಯನ್ನು ಸಂಪೂರ್ಣವಾಗಿ ಪರಿಶೀಲಿಸಿ ಸ್ವೀಕೃತಗೊಂಡ ಕಾರಣ ಉಲ್ಲೇಖ(1) ರಡಿ ಸದರಿ ಸದರಿ ಪ್ರಸ್ತಾವಣೆಯ ಎಲ್ಲ ಲಗತ್ತುಗಳ 7 ಪ್ರತಿಯನ್ನು ಹಾರ್ಡ್‌ಕಾಪಿಯಲ್ಲಿ ಸಲ್ಲಿಸಲು ಸೂಚಿಸಿರುತ್ತಾರೆ. ಅದರನ್ವಯ ಉಲ್ಲೇಖ (2) ರನ್ವಯ ಆನಲೈನ್ ಮುಖಾಂತರ ಸಲ್ಲಿಸಲಾದ 7 ಪ್ರತಿಗಳ ಪ್ರಸ್ತಾವಣೆಯನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರು ಲೋಕೋಪಯೋಗಿ ಇಲಾಖೆ ಉಪವಿಭಾಗ ಖಾನಾಪೂರ ಇವರು ಸಲ್ಲಿಸಿದ್ದು, ಸದರಿ ಪ್ರತಿಗಳನ್ನು ಈ ಪತ್ರಕ್ಕೆ ಲಗತ್ತಿಸಿ ಆದಷ್ಟು ಬೇಗನೆ ಅನುಮೋದನೆ ದೊರಕಿಸಿಕೊಡಲು ವಿನಂತಿಸಲಾಗಿದೆ.

ಅರಣ್ಯ ಪ್ರದೇಶದ ಹಾಗೂ ಗ್ರಾಮೀಣ ಜನರ ಶಾಲಾ-ಕಾಲೇಜ್ ಮಕ್ಕಳಿಗೆ ಹಾಗೂ ಗ್ರಾಮಸ್ಥರಿಗೆ ತಾಲೂಕು ಮತ್ತು ಜಿಲ್ಲಾಕೇಂದ್ರಗಳಿಗೆ ಮಳೆಗಾಲದಲ್ಲಿ ಸಂಚರಿಸಲು ಬಹಳ ತೊಂದರೆಯಾಗುತ್ತಿರುವ ಕಾರಣ ಸರ್ಕಾರದ ಮಹಾಂತ್ವಾಕಾಂಕ್ಷೆ ಯೋಜನೆಯಾದ "ಶಾಲಾ ಸಂಪರ್ಕ ಸೇತು" ಯೋಜನೆಯಡಿ ಕಾಲುಸಂಕ (Footbridge) ನಿರ್ಮಾಣ ಮಾಡಲು ಸರ್ಕಾರದಿಂದ ಅನುಮೋದನೆಯಾಗಿದ್ದು, ಗುತ್ತಿಗೆಯನ್ನು ಈಗಾಗಲೇ ನೇಮಿಸಲಾಗಿದೆ. ಸದರಿ ಕಾಮಗಾರಿಯನ್ನು ಪ್ರಾರಂಭಿಸಿ ಮುಕ್ತಾಯಗೋಳಿಸಿ ಸಾರ್ವನಿಕರಿಗೆ ಅನುಕೂಲ ಮಾಡಲು ಮಾನ್ಯ ಶಾಸಕರು ಖಾನಾಪೂರ ಮತಕ್ಷೇತ್ರ ಹಾಗೂ ಸ್ಥಳೀಯ ಜನಪ್ರತಿನಿಧಿಗಳು ಮೇಲಿಂದ ಮೇಲೆ ಕಛೇರಿಗೆ ಬಂದು ಒತ್ತಾಯ ಮಾಡುತ್ತಿದ್ದು, ಆದಷ್ಟು ಬೇಗನೆ ಅರಣ್ಯ ಭೂಮಿಯನ್ನು ಮಂಜೂರು ಮಾಡಿ ಕೆಲಸ ಪ್ರಾರಂಭಿಸಲು ಅನುವು ಮಾಡಿಕೊಡಲು ವಿನಂತಿಸಲಾಗಿದೆ.

ಅಡಕ ಃ ಪ್ರಸ್ತಾವಣೆಗಳು-8 ಪ್ರತಿಗಳಲ್ಲಿ

ತಮ್ಮ ವಿಶ್ವಾಸಿ

ಕಾರ್ಯನಿರ್ವಾಹಕ ಅಭಿಯಂತರರು
ಲೋಕೋಪಯೋಗಿ ಇಲಾಖೆ
ಬೆಳಗಾವಿ ವಿಭಾಗ ಬೆಳಗಾವಿ

o/c

1. ಪ್ರತಿಯನ್ನು ಮಾನ್ಯ ಜಿಲ್ಲಾಧಿಕಾರಿಗಳು ಬೆಳಗಾವಿ ಜಿಲ್ಲೆ ಬೆಳಗಾವಿ ಇವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಗೌರವಪೂರ್ವಕವಾಗಿ ಸಲ್ಲಿಸಲಾಗಿದೆ.
2.ಪ್ರತಿಯನ್ನು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಉಪವಿಭಾಗ ಖಾನಾಪುರ ಇವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

ಕಾರ್ಯನಿರ್ವಾಹಕ ಅಭಿಯಂತರರು
ಲೋಕೋಪಯೋಗಿ ಇಲಾಖೆ
ಬೆಳಗಾವಿ ವಿಭಾಗ ಬೆಳಗಾವಿ

29/7/2020
ಸ್ವೀಕೃತಿ ಸಹಾಯಕರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಳಗಾವಿ
(INWARD)

Received 30/7/2020
ಸ್ವೀಕೃತಿ
ಉಪ ಅರಣ್ಯ ಸಂರಕ್ಷಣಾಧಿಕಾರಿ
ಬೆಳಗಾವಿ ವಿಭಾಗ, ಬೆಳಗಾವಿ.